# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 850(749) |
| ಸದಸ್ಯರ ಹೆಸರು | : | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 20-09-2022 |
| ಉತ್ತರಿಸುವ ಸಚಿವರು | : | ನಗರಾಭಿವೃದ್ಧಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮಂಗಳೂರು ನಗರಾಭಿವೃದ್ಧಿ ಯೋಜನೆಯಾದ ಮಂಗಳೂರು ಸ್ಮಾರ್ಟ್ ಸಿಟಿ ಯೋಜನೆಯ ಕಾಮಗಾರಿಗಳು ಯಾವಾಗ ಮುಗಿಯಲಿವೆ; ನಿಯಮಗಳನುಸಾರ ಯಾವಾಗ ಕಾಮಗಾರಿಗಳು ಮುಗಿಯಬೇಕಾಗಿತ್ತು; ಕಾಮಗಾರಿಗಳ ಮುಕ್ತಾಯ ದಿನಾಂಕವನ್ನು ವಿಸ್ತರಿಸಲಾಗಿದೆಯೇ; (ಕಾರಣ ಸಹಿತ ವಿವರ ನೀಡುವುದು) | ಮಂಗಳೂರು ನಗರವು ಸ್ಮಾರ್ಟ್ ಸಿಟಿ ಅಭಿಯಾನದ 2ನೇ ಸುತ್ತಿನ ಸ್ಪರ್ಧೆಯಲ್ಲಿ ದಿನಾಂಕ:03.10.2016 ರಂದು ಆಯ್ಕೆಯಾಗಿದ್ದು, ಮಂಗಳೂರು ನಗರದಲ್ಲಿ ಸ್ಮಾರ್ಟ್ ಸಿಟಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br><br>2020 ಹಾಗೂ 2021ನೇ ಸಾಲಿನಲ್ಲಿ ಕೋವಿಡ್-19 ಸಾಂಕ್ರಮಿಕ ರೋಗದಿಂದ ವಿಧಿಸಲಾಗಿದ್ದ ಲಾಕ್ ಡೌನ್ ಹಾಗೂ ಕೆಲಸಗಾರರ ಕೊರತೆಯನ್ನು ಪರಿಗಣಿಸಿ ಕೇಂದ್ರ ಸರ್ಕಾರವು ಸ್ಮಾರ್ಟ್ ಸಿಟಿ ಯೋಜನೆಯ ಕಾಲಮಿತಿಯನ್ನು ಜೂನ್-2023 ರವರಗೆ ವಿಸ್ತರಿಸಿರುತ್ತದೆ.<br><br>ಮಂಗಳೂರು ನಗರದಲ್ಲಿ ಸ್ಮಾರ್ಟ್ ಸಿಟಿ ಯೋಜನೆಯಡಿ ಕೈಗೊಂಡಿರುವ ಕಾಮಗಾರಿವಾರು ವಿವರಗಳನ್ನು **ಅನುಬಂಧ**ದಲ್ಲಿ ನೀಡಿದೆ. |
| ಆ) | ಮಂಗಳೂರು ಸ್ಮಾರ್ಟ್ ಸಿಟಿ ಯೋಜನೆಯ ಕಾಮಗಾರಿಯನ್ನು ಮಾಡುವಾಗ ಅಗೆದ ರಸ್ತೆಗಳನ್ನು ಪಾದಚಾರಿ ದಾರಿಗಳನ್ನು ರಸ್ತೆ ಬದಿಗಳನ್ನು ಸಂಚಾರ ಯೋಗ್ಯವನ್ನಾಗಿ ಯಾವಾಗ ಮಾಡಲಾಗುವುದು; ಕಾಮಗಾರಿಗಳ ಘನ ತ್ಯಾಜ್ಯಗಳನ್ನು ಗುತ್ತಿಗೆದಾರರು ಅಲ್ಲಲ್ಲಿ ಬಿಟ್ಟು ಸಾರ್ವಜನಿಕ ಸಂಚಾರಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಸಮಸ್ಯೆಗಳನ್ನು ಯಾವಾಗ ಪರಿಹರಿಸಲಾಗುವುದು; (ವಿವರ ನೀಡುವುದು) | ಮಂಗಳೂರು ನಗರ ವ್ಯಾಪ್ತಿಯಲ್ಲಿ ಪ್ರಸಕ್ತ ಸಾಲಿನಲ್ಲಿ ಅತೀ ಹೆಚ್ಚು ಮಳೆ ಬೀಳುತ್ತಿದ್ದು, ಸ್ಮಾರ್ಟ್ ಸಿಟಿ ಯೋಜನೆ ಕಾಮಗಾರಿಗಳ ಜೊತೆ ಕೆ.ಯು.ಐ.ಡಿ.ಎಫ್.ಸಿ ವತಿಯಿಂದ ಕೈಗೊಂಡಿರುವ 24x7 ನೀರು ಸರಬರಾಜು ಕಾಮಗಾರಿಗಳು, ಕ್ವಿಮಿಪ್‌ಯೋಜನೆ ಅಡಿಯಲ್ಲಿ ಕೈಗೊಂಡಿರುವ ಒಳಚರಂಡಿ ಕಾಮಗಾರಿಗಳು, ಗೈಲ್‌ಗ್ಯಾಸ್ ಕಾಮಗಾರಿಗಳು ಪ್ರಗತಿಯಲ್ಲಿರುವ ಹಿನ್ನಲೆಯಲ್ಲಿ ಈ ಮೇಲಿನ ಎಲ್ಲಾ ಇಲಾಖೆಗಳ ಜೊತೆ ಸಮನ್ವಯ ಸಾಧಿಸಿಕೊಂಡು ನಿಗದಿತ ಕಾಲಾವಧಿಯೊಳಗೆ ಸ್ಮಾರ್ಟ್ ಸಿಟಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕ್ರಮವಹಿಸಲಾಗಿದೆ. ಅಗೆದ ರಸ್ತೆಗಳನ್ನು, ಪಾದಚಾರಿ ದಾರಿಗಳನ್ನು, ರಸ್ತೆ ಬದಿಗಳನ್ನು ಹಂತ ಹಂತವಾಗಿ ಕಾಮಗಾರಿ ಪೂರ್ಣಗೊಳಿಸಿ ಸಂಚಾರಕ್ಕೆ ಯೋಗ್ಯವನ್ನಾಗಿ ಮಾಡಲಾಗುವುದು. ಕಾಮಗಾರಿಯ ವೇಳೆ ಉತ್ಪತ್ತಿಯಾಗುತ್ತಿರುವ (C & D waste) ಘನ ತ್ಯಾಜ್ಯವನ್ನು ಈಗಾಗಲೇ C & D waste management ನಿಯಮಾವಳಿಯಂತೆ ವಿಲೇವಾರಿ ನಡೆಸಲು ಮತ್ತು ಸಾರ್ವಜನಿಕ ಸಂಚಾರಕ್ಕೆ ತೊಂದರೆಯಾಗದಂತೆ ಗುತ್ತಿಗೆದಾರರಿಗೆ ಕಾಮಗಾರಿ ನಡೆಯುತ್ತಿರುವ ಸಮಯದಲ್ಲಿಯೇ ತ್ಯಾಜ್ಯವನ್ನು ತೆರವುಗೊಳಿಸಲು ನಿರ್ದೇಶಿಸಲಾಗಿದೆ. |

| | | |
|---|---|---|
| ಇ) | ಮಂಗಳೂರು ನಗರವು ಅತಿ ಹೆಚ್ಚು ಮಳೆ ಬೀಳುವ ಪ್ರದೇಶವಾಗಿದ್ದು ಈಗಾಗಲೇ ಮಳೆ ನೀರು ರಸ್ತೆಯಲ್ಲಿ ನಿಂತು ಮನೆ/ಅಂಗಡಿಗಳಿಗೆ ನುಗ್ಗಿರುವುದು, ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಮನೆ/ ಅಂಗಡಿಗಳಿಗೆ ಮಾಲೀಕರಿಗೆ ಪರಿಹಾರ ನೀಡಲಾಗಿದೆಯೇ; ಮಳೆಯ ನೀರನ್ನು ಸರಾಗವಾಗಿ ಹರಿದು ಹೋಗಲು ಸ್ಮಾರ್ಟ್ ಸಿಟಿ ಯೋಜನೆಯ ಕಾಮಗಾರಿಗಳಲ್ಲಿ ಸೂಕ್ತ ಮಾರ್ಪಾಡು ಮಾಡಲಾಗಿದೆಯೇ? (ಪೂರ್ಣ ವಿವರ ನೀಡುವುದು) | ಮಂಗಳೂರು ಸ್ಮಾರ್ಟ್ ಸಿಟಿ ವತಿಯಿಂದ ನಿರ್ವಹಿಸಲಾಗುತ್ತಿರುವ ರಸ್ತೆ ಅಭಿವೃದ್ಧಿ ಕಾಮಗಾರಿಗಳಲ್ಲಿ ಮಳೆ ನೀರಿನಿಂದಾಗಿ ವಾಹನ ಸಂಚಾರಕ್ಕೆ ಅಡ್ಡಿ ಉಂಟಾಗಿರುವುದಿಲ್ಲ ಹಾಗೂ ರಸ್ತೆ ಬದಿ ಮಳೆ ನೀರು ಚರಂಡಿ ನಿರ್ವಹಿಸಲು ಸ್ಥಳಾವಕಾಶ ಕಡಿಮೆ ಇದ್ದ ಸ್ಥಳಗಳಲ್ಲಿ ತಾತ್ಕಾಲಿಕವಾಗಿ ಮಳೆ ನೀರು ಸರಾಗವಾಗಿ ಹರಿಯಲು ಸೂಕ್ತ ವ್ಯವಸ್ಥೆ ಕಲ್ಪಿಸಲಾಗಿದ್ದು, ಪ್ರಸ್ತುತ ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ಕಾಮಗಾರಿ ಸ್ಥಳಗಳಲ್ಲಿ ಮಳೆ ನೀರು ರಸ್ತೆಯಲ್ಲಿ ನಿಂತಿರುವ ಬಗ್ಗೆ ಹಾಗೂ ಮನೆ/ ಅಂಗಡಿಗಳಿಗೆ ನುಗ್ಗಿರುವ ಬಗ್ಗೆ ವರದಿಯಾಗಿರುವುದಿಲ್ಲ. ಮಳೆನೀರು ಸರಾಗವಾಗಿ ಹರಿಯಲು ತಾತ್ಕಾಲಿಕವಾಗಿ ಕೊಳವೆ ಅಳವಡಿಸಿ ವ್ಯವಸ್ಥೆ ಕಲ್ಪಿಸಲಾಗಿದೆ. |

ಸಂಖ್ಯೆ:ನಅಇ 149 ಸಿಎಸ್ಎಸ್ 2022

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು

ಅನುಬಂಧ-1

## ಮಂಗಳೂರು ಸ್ಮಾರ್ಟ್‌ಸಿಟಿ ಲಿಮಿಟೆಡ್

### ಪ್ರಗತಿಯಲ್ಲಿರುವ ಕಾಮಗಾರಿಗಳು

| ಕ್ರ.ಸಂ | ಕಾಮಗಾರಿಯ ಹೆಸರು | SCP ಮೊತ್ತ | ಕಾರ್ಯಾದೇಶ ಮೊತ್ತ | ಕಾರ್ಯದೇಶ ನೀಡಿದ ದಿನಾಂಕ | ಕರಾರು ಪತ್ರದ ಪ್ರಕಾರ ಕೆಲಸ ಪೂರ್ಣಗೊಳಿಸಬೇಕಾದ ದಿನಾಂಕ | ಕಾಮಗಾರಿಯು ಪೂರ್ಣಗೊಳಿಸಲು ವಾಸ್ತವಿಕವಾಗಿ ಬೇಕಾಗಿರುವ ಅವಧಿ | ಪ್ರಸ್ತುತ ಸ್ಥಿತಿ |
|---|---|---|---|---|---|---|---|
| 1 | ಪ್ರದೇಶ ಆಧಾರಿತ ಅಭಿವೃದ್ಧಿ ಪ್ರದೇಶದಲ್ಲಿ ಒಳಚರಂಡಿ ವಲಯ-4 (ಭಾಗ-2) ಮತ್ತು ವಲಯ-3 (ಭಾಗ-1) | 9.50 | 8.55 | 01.02.2019 | 31.12.2020 | 30.11.2022 | ಕೋವಿಡ್-19 ಲಾಕ್ ಡೌನ್ ಹಾಗೂ ತ್ಯಾಜ್ಯ ನಿರ್ವಹಣೆ ಕುರಿತಂತೆ ಹೈಕೋರ್ಟ್ ತಡೆಯಾಜ್ಞೆ ಹೊರಡಿಸಿದ ಕಾರಣ ಎಲ್ಲಾ ಕಾಮಗಾರಿಗಳನ್ನು 23.12.2020 ರಿಂದ 15.03.2021 ತನಕ ನಿಲ್ಲಿಸಲಾಯಿತು. ಸದ್ರಿ ಪ್ರದೇಶದಲ್ಲಿ ನೀರಿನ ಒಸರು ಜಾಸ್ತಿಯಿದ್ದುದರಿಂದ ಮಳೆಗಾಲದಲ್ಲಿ ಕಾಮಗಾರಿ ನಡೆಸಲು ಸಾಧ್ಯವಾಗಲಿಲ್ಲ. ಆದ್ದರಿಂದ ಕಾಮಗಾರಿ ನಿರ್ವಹಿಸಲು ಹೆಚ್ಚಿನ ಕಾಲವಕಾಶದ ಅವಶ್ಯಕತೆ ಇರುತ್ತದೆ. |
| 2 | ಪ್ರದೇಶ ಆಧಾರಿತ ಅಭಿವೃದ್ಧಿ ಪ್ರದೇಶದಲ್ಲಿ 100% ಒಳಚರಂಡಿ - ಪ್ಯಾಕೇಜ್ 4 | 25.70 | 24.05 | 23.08.2019 | 15.02.2021 | 31.03.2023 | ಕೋವಿಡ್-19 ಲಾಕ್ ಡೌನ್ ಹಾಗೂ ತ್ಯಾಜ್ಯ ನಿರ್ವಹಣೆ ಕುರಿತಂತೆ ಹೈಕೋರ್ಟ್ ತಡೆಯಾಜ್ಞೆ ಹೊರಡಿಸಿದ ಕಾರಣ ಕಾಮಗಾರಿಯನ್ನು 23.12.2020 ರಿಂದ 15.03.2021 ತನಕ ನಿಲ್ಲಿಸಲಾಯಿತು. ನೀರಿನ ಒಸರು ಜಾಸ್ತಿಯಿದ್ದುದರಿಂದ ಮಳೆಗಾಲದಲ್ಲಿ ಕಾಮಗಾರಿ ನಡೆಸಲು ಸಾಧ್ಯವಾಗಿಯಿರುವುದಿಲ್ಲ. ಪ್ರಸ್ತುತ ಕಾಮಗಾರಿಯು ಪ್ರಗತಿಯಲ್ಲಿದೆ. |
| 3 | ಸ್ಮಾರ್ಟ್ ರಸ್ತೆ ಪ್ಯಾಕೇಜ್-2 (ಲೂಪ್ ರಸ್ತೆ) | 14.50 | 13.76 | 04.07.2019 | 03.12.2020 | 30.12.2022 | ಮಂಗಳೂರು ನಗರದಲ್ಲಿ ಸ್ಮಾರ್ಟ್‌ಸಿಟಿ ಯೋಜನೆಯಡಿ ಪ್ರದೇಶ ಆಧಾರಿತ ಅಭಿವೃದ್ಧಿ (ಎಬಿಡಿ) ಯೋಜನೆಯಡಿ ವಾಣಿಜ್ಯ ಪ್ರದೇಶಗಳಲ್ಲಿ ಲಭ್ಯವಿರುವ "Right of Way" (ROW) ಗೆ ಸೀಮಿತಗೊಳಿಸಿ ರಸ್ತೆ ಅಭಿವೃದ್ಧಿ ಸೇರಿದಂತೆ ಕಾಮಗಾರಿಗಳನ್ನು ಪ್ರಸ್ತಾಪಿಸಲಾಗಿರುತ್ತದೆ. ಆದರೆ ಮಂಗಳೂರು ಮಹಾನಗರ ಪಾಲಿಕೆ ಕೋರಿಕೆಯಂತೆ ಕಾಮಗಾರಿಯ ಅನುಷ್ಠಾನ ಹಂತದಲ್ಲಿ ರಸ್ತೆಗಳನ್ನು ನಗರದ "Master Plan"ನ ವಲಯ ನಿಯಮಾವಳಿ ಪ್ರಕಾರವೇ ಅಗಲೀಕರಣಗೊಳಿಸಿ ಕ್ಯಾರೆಜ್‌ವೇ, ಒಳಚರಂಡಿ ಫುಟ್ ಪಾತ್‌ಗಳನ್ನು ಅಭಿವೃದ್ಧಿಪಡಿಸಬೇಕಾಗಿದೆ. ಪ್ರಸ್ತುತ ರಸ್ತೆಯ ಎರಡು ಬದಿಯ ಹಲವಾರು ಖಾಸಗಿ ಸ್ಥಳಗಳನ್ನು ಪಡಿಸಿಕೊಂಡು ರಸ್ತೆ ಅಗಲೀಕರಣಗೊಳಿಸಿ ಕಾಮಗಾರಿ ನಿರ್ವಹಿಸುವುದು ಅಗತ್ಯವಿರುತ್ತದೆ. ಈ ನಿಟ್ಟಿನಲ್ಲಿ ಅಂತಹ ಖಾಸಗಿ ಸ್ಥಳಗಳನ್ನು ಮಂಗಳೂರು ಮಹಾನಗರ ಪಾಲಿಕೆ ವತಿಯಿಂದ ಭೂಸ್ವಾಧೀನ/ಟಿ.ಡಿ.ಆರ್ ಯೋಜನೆಯಡಿ ಹಸ್ತಾಂತರಿಸಿಕೊಂಡು ಯೋಜನಾ ಅನುಷ್ಠಾನಕ್ಕಾಗಿ ಮಂಗಳೂರು ಸ್ಮಾರ್ಟ್‌ಸಿಟಿಗೆ ಹಸ್ತಾಂತರಿಸಿದ್ದಲ್ಲಿ ಮಾತ್ರ ಸ್ಮಾರ್ಟ್ ರಸ್ತೆ ಕಾಮಗಾರಿಗಳನ್ನು Master Plan ಪ್ರಕಾರ ಅನುಷ್ಠಾನಗೊಳಿಸಬೇಕಾಗಿದೆ. ಆದರೆ, ಖಾಸಗಿ ಸ್ಥಳಗಳನ್ನು ಹಸ್ತಾಂತರಿಸಿಕೊಳ್ಳುವ ಕ್ರಮವು ಬಹಳಷ್ಟು ಸಮಯ |
| 4 | ಸ್ಮಾರ್ಟ್ ರಸ್ತೆ ಪ್ಯಾಕೇಜ್-4 | 48.00 | 41.21 | 16.09.2019 | 15.02.2021 | 15.12.2022 | |
| 5 | ಸ್ಮಾರ್ಟ್ ರಸ್ತೆ ಪ್ಯಾಕೇಜ್-5 | 49.00 | 46.87 | 16.11.2019 | 15.03.2021 | 31.03.2023 | |
| 6 | ಸ್ಮಾರ್ಟ್ ರಸ್ತೆ ಪ್ಯಾಕೇಜ್-6 | 48.00 | 43.74 | 04.10.2019 | 15.02.2021 | 15.02.2023 | |
| 7 | ಸ್ಮಾರ್ಟ್ ರಸ್ತೆ ಪ್ಯಾಕೇಜ್-3 | 49.00 | 44.39 | 19.11.2019 | 19.03.2019 | 30.04.2023 | |
| 8 | ಸ್ಮಾರ್ಟ್ ರಸ್ತೆ ಪ್ಯಾಕೇಜ್-7 | 40.52 | 38.74 | 18.11.2019 | 18.03.2021 | 30.04.2023 | |
| 9 | ಸ್ಮಾರ್ಟ್ ರಸ್ತೆ ಪ್ಯಾಕೇಜ್-9 ಭೂಗತ ಪಾದಚಾರಿ ಮಾರ್ಗ ನಿರ್ಮಾಣ | 7.00 | 5.93 | 20.09.2019 | 15.02.2021 | 31.06.2022 | ಕೋವಿಡ್-19 ಲಾಕ್ ಡೌನ್ ಹಾಗೂ ತ್ಯಾಜ್ಯ ನಿರ್ವಹಣೆ ಕುರಿತಂತೆ ಹೈಕೋರ್ಟ್ ತಡೆಯಾಜ್ಞೆ ಹೊರಡಿಸಿದ ಕಾರಣ ಕಾಮಗಾರಿಯನ್ನು 23.12.2020 ರಿಂದ 15.03.2021 ತನಕ ಸ್ಥಗಿತಗೊಂಡಿದ್ದು, ಭೂಗತ ಕೇಬಲ್ ಗಳನ್ನು ಸ್ಥಳಾಂತರಿಸಬೇಕಾಗಿದ್ದ ಕಾರಣ ಕೆಲಸ ವಿಳಂಬಗೊಂಡಿದ್ದು, ಪ್ರಸ್ತುತ ಕಾಮಗಾರಿ ಪೂರ್ಣಗೊಂಡಿದೆ. |
| 10 | ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ 24X7 ನೀರು ಸರಬರಾಜು ಯೋಜನೆ ಅನುಷ್ಠಾನಕ್ಕಾಗಿ ಮಂಗಳೂರು ಸ್ಮಾರ್ಟ್ ಸಿಟಿ ವತಿಯಿಂದ ಮೀಸಲಿಟ್ಟ ಮೊತ್ತ | 114.00 | 114.00 | - | - | - | ಒಟ್ಟು ಮೊತ್ತ ರೂ.114 ಕೋಟಿ ಮೀಸಲು ಇಡಲಾಗಿದ್ದು, ಮಂಗಳೂರು ಸ್ಮಾರ್ಟ್‌ಸಿಟಿ ವತಿಯಿಂದ ಒಟ್ಟು ಮೊತ್ತ ರೂ. 81.00 ಕೋಟಿಗಳನ್ನು ಪಾವತಿಸಲಾಗಿದೆ. |

| | | | | | | | |
|---|---|---|---|---|---|---|---|
| 11 | ಮಂಗಳೂರು ಮಹಾನಗರ ಪಾಲಿಕೆ ಬಲಬದಿಯಲ್ಲಿ ಹೆಚ್ಚುವರಿ ಕಟ್ಟಡ ನಿರ್ಮಾಣ | 5.00 | 4.26 | 13.02.2020 | 12.02.2021 | 31.09.2022 | ಕೋವಿಡ್-19 ಲಾಕ್ ಡೌನ್ ಹಾಗೂ ತ್ಯಾಜ್ಯ ನಿರ್ವಹಣೆ ಕುರಿತಂತೆ ಹೈಕೋರ್ಟ್ ತಡೆಯಾಜ್ಞೆ ಹೊರಡಿಸಿದ ಕಾರಣ ಕಾಮಗಾರಿಯನ್ನು 23.12.2020 ರಿಂದ 15.03.2021 ತನಕ ಸ್ಥಗಿತಗೊಂಡಿದ್ದು, ಆದ್ದರಿಂದ ಕೆಲಸ ವಿಳಂಬಗೊಂಡಿದ್ದು, ಪ್ರಸ್ತುತ ಪೂರ್ಣಗೊಳ್ಳುವ ಹಂತದಲ್ಲಿದೆ |
| 12 | ಅಂತರಾಷ್ಟ್ರೀಯ ಈಜುಕೊಳದೊಂದಿಗೆ ಸಮೂದಾಯ ಮಟ್ಟದ ಸೌಲಭ್ಯಗಳು | 24.94 | 21.96 | 20.02.2020 | 20.02.2022 | 31.01.2023 | ಕೋವಿಡ್-19 ಲಾಕ್ ಡೌನ್ ಹಾಗೂ ತ್ಯಾಜ್ಯ ನಿರ್ವಹಣೆ ಕುರಿತಂತೆ ಹೈಕೋರ್ಟ್ ತಡೆಯಾಜ್ಞೆ ಹೊರಡಿಸಿದ ಕಾರಣ ಕಾಮಗಾರಿಯನ್ನು 23.12.2020 ರಿಂದ 15.03.2021 ತನಕ ಸ್ಥಗಿತಗೊಂಡಿದ್ದು, ಆದ್ದರಿಂದ ಕೆಲಸ ವಿಳಂಬಗೊಂಡಿದ್ದು, ಪ್ರಸ್ತುತ ಪ್ರಗತಿಯಲ್ಲಿದೆ. |
| 13 | ಕದ್ರಿ ಉದ್ಯಾನವನದ ರಸ್ತೆ ಹಾಗೂ ಉದ್ಯಾನವನದ ಆವರಣದ ಹೊರಗೆ ಸಮಗ್ರ ಅಭಿವೃದ್ಧಿ ಕಾಮಗಾರಿ | 12.00 | 9.07 | 18.02.2020 | 18.02.2022 | 30.05.2022 | ಕೋವಿಡ್-19 ಲಾಕ್ ಡೌನ್ ಹಾಗೂ ತ್ಯಾಜ್ಯ ನಿರ್ವಹಣೆ ಕುರಿತಂತೆ ಹೈಕೋರ್ಟ್ ತಡೆಯಾಜ್ಞೆ ಹೊರಡಿಸಿದ ಕಾರಣ ಕಾಮಗಾರಿಯನ್ನು 23.12.2020 ರಿಂದ 15.03.2021 ತನಕ ಸ್ಥಗಿತಗೊಂಡಿದ್ದು, ಪಾಲಿಕೆಯ ಭೂಗತ ಒಳಚರಂಡಿ ಕಾಮಗಾರಿಯು ಪ್ರಗತಿಯಲ್ಲಿದ ಕಾರಣ ಕಾಮಗಾರಿಯು ವಿಳಂಬಗೊಂಡಿದ್ದು, ಪ್ರಸ್ತುತ ಕಾಮಗಾರಿ ಪೂರ್ಣಗೊಂಡಿದೆ. |
| 14 | ಕಾವೂರು ಕೆರೆಯ ಪುನರ್‌ಶ್ಚೇತನಗೊಳಿಸುವಿಕೆ | 8.00 | 6.94 | 27.02.2020 | 16.03.2021 | 31.12.2022 | ಕೋವಿಡ್-19 ಲಾಕ್ ಡೌನ್ ಹಾಗೂ ತ್ಯಾಜ್ಯ ನಿರ್ವಹಣೆ ಕುರಿತಂತೆ ಹೈಕೋರ್ಟ್ ತಡೆಯಾಜ್ಞೆ ಹೊರಡಿಸಿದ ಕಾರಣ ಕಾಮಗಾರಿಯನ್ನು 23.12.2020 ರಿಂದ 15.03.2021 ತನಕ ಸ್ಥಗಿತಗೊಂಡಿದ್ದು, ಆದ್ದರಿಂದ ಕೆಲಸ ವಿಳಂಬಗೊಂಡಿದ್ದು, ಪ್ರಸ್ತುತ ಮಳೆಗಾಲವಾಗಿದ್ದು ಕಾಮಗಾರಿ ಪ್ರಗತಿಯಲ್ಲಿದೆ. |
| 15 | ಕೇಂದ್ರ ಮಾರುಕಟ್ಟೆಯ ಪುನರ್ವಸತಿ (ತಾತ್ಕಾಲಿಕ ಮಾರುಕಟ್ಟೆ) | 6.24 | 5.06 | 02.05.2020 | 02.11.2020 | - | ಮಂಗಳೂರು ಮಹಾನಗರ ಪಾಲಿಕೆಯ ಸೂಚನೆಯಂತೆ ತಾತ್ಕಲಿಕವಾಗಿ ಕಾಮಗಾರಿಯನ್ನು ತಡೆಹಿಡಿಯಲಾಗಿದೆ. |
| 16 | ವೆನ್ಲಾಕ್ ಆಸ್ಪತ್ರೆಯ ನವೀಕರಣ- ಸರ್ಜಿಕಲ್ ಬ್ಲಾಕ್ | 43.00 | 43.00 | 08.10.2020 | 14.10.2022 | 30.05.2023 | ಕಾಮಗಾರಿ ಪ್ರಗತಿಯಲ್ಲಿದೆ |
| 17 | ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ರಾಷ್ಟ್ರೀಯ ಹೆದ್ದಾರಿ 66 ರಿಂದ ಮಹಾಕಾಳಿಪಡ್ಪು ರೈಲ್ವೆ ಕೆಳ ಸೇತುವೆ ಮುಖಾಂತರ ಮೊರ್ಗಾನ್ಸ್ ಗೇಟ್ ಜಂಕ್ಷನ್ ವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿ | 49.95 | 49.95 | 18.03.2021 | 17.03.2022 | 17.03.2023 | ಕಾಮಗಾರಿ ಪ್ರಗತಿಯಲ್ಲಿದೆ. |
| 18 | ಮಂಗಳೂರು ಮಹಾನಗರ ಪಾಲಿಕೆಗೆ ಸೇರಿದ ತುಂಬೆ ವೆಂಟೆಡ್ ಡ್ಯಾಂ ಬಳಿ ಕುಸಿದ ತಡೆಗೋಡೆ ಪುನರ್ ನಿರ್ಮಾಣ ಹಾಗೂ ಹಾಲಿ ಇರುವ ಜಾಕ್‌ವೆಲ್-2 ಪುನಶ್ಚೇತನ ಕಾಮಗಾರಿ | 10.50 | 10.50 | 25.05.2021 | 25.05.2021 | 31.12.2022 | ಮಳೆಗಾಲದಲ್ಲಿ ನೀರಿನ ಮಟ್ಟ ಹೆಚ್ಚುರಿವುದರಿಂದ ಕಾಮಗಾರಿ ಕೈಗೆತ್ತಿಕೊಳ್ಳಲು ಕಷ್ಟಸಾಧ್ಯವಾಗಿದ್ದು, ಇದರಿಂದ ಕಾಮಗಾರಿಯು ವಿಳಂಬವಾಗಿರುತ್ತದೆ. ಪ್ರಸ್ತುತ ಕಾಮಗಾರಿಯು ಪ್ರಗತಿಯಲ್ಲಿದೆ. |
| 19 | ಉರ್ವಾ ಮಾರುಕಟ್ಟೆ ಬಳಿ ಒಳಾಂಗಣ ಕ್ರೀಡಾಂಗಣ ನಿರ್ಮಾಣ | 20.54 | 21.07 | 13.08.2021 | 13.08.2023 | 30.03.2023 | ಕಾಮಗಾರಿ ಪ್ರಗತಿಯಲ್ಲಿದೆ |
| 20 | ಕದ್ರಿ ಉದ್ಯಾನವನದ ರಸ್ತೆ ಹಾಗೂ ಉದ್ಯಾನವನದ ಆವರಣದ ಹೊರಗೆ ಸಮಗ್ರ ಅಭಿವೃದ್ಧಿ ಕಾಮಗಾರಿ ಹಂತ-2 | 4.50 | 4.50 | 16.12.2021 | 15.12.2022 | 31.05.2022 | ಕಾಮಗಾರಿ ಪ್ರಗತಿಯಲ್ಲಿದೆ |
| 21 | ಕಾರ್ ಸ್ಟ್ರೀಟ್ ಮತ್ತು ವೆಂಕಟರಮಣ ದೇವಲಾಯದ ಪ್ರದೇಶಗಳನ್ನು ಧಾರ್ಮಿಕ ವಲಯವನ್ನಾಗಿ ಪರಿವರ್ತಿಸುವ ಕಾಮಗಾರಿ | 5.00 | 4.59 | 07.01.2022 | 06.01.2022 | 31.11.2022 | ಕಾಮಗಾರಿ ಪ್ರಗತಿಯಲ್ಲಿದೆ |
| 22 | ನಿರ್ದೇಶನ ಮತ್ತು ನಿಯಂತ್ರಣ ಕೇಂದ್ರ ಅನುಸ್ಥಾಪನೆ ಹಂತ-2 | 28.89 | 28.89 | 05.05.2022 | 05.05.2023 | 05.05.2023 | ಸೆಪ್ಟೆಂಬರ್ ಮಾಹೆ ಒಳಗೆ ಕಾಮಗಾರಿ ಪ್ರಾರಂಭಿಸಲು ಸೂಕ್ತ ಕ್ರಮವಹಿಸಲಾಗುವುದು |
| 23 | ಜಲಾಭಿಮುಖಿ ಪ್ರದೇಶ ಅಭಿವೃದ್ಧಿ ಹಂತ-1A (Promonade development) | 22.87 | 22.87 | 05.05.2022 | 05.05.2023 | 05.05.2023 | ಸೆಪ್ಟೆಂಬರ್ ಮಾಹೆ ಒಳಗೆ ಕಾಮಗಾರಿ ಪ್ರಾರಂಭಿಸಲು ಸೂಕ್ತ ಕ್ರಮವಹಿಸಲಾಗುವುದು |
| 24 | ಜಲಾಭಿಮುಖಿ ಪ್ರದೇಶ ಅಭಿವೃದ್ಧಿ ಹಂತ-1B (Promonade development) | 13.56 | 13.56 | 05.05.2022 | 05.05.2023 | 05.05.2023 | ಸೆಪ್ಟೆಂಬರ್ ಮಾಹೆ ಒಳಗೆ ಕಾಮಗಾರಿ ಪ್ರಾರಂಭಿಸಲು ಸೂಕ್ತ ಕ್ರಮವಹಿಸಲಾಗುವುದು |
| 25 | ಜಲಾಭಿಮುಖಿ ಪ್ರದೇಶ ಅಭಿವೃದ್ಧಿ ಹಂತ-1C (Promonade development) | 6.16 | 6.16 | 05.05.2022 | 05.05.2023 | 05.05.2023 | ಸೆಪ್ಟೆಂಬರ್ ಮಾಹೆ ಒಳಗೆ ಕಾಮಗಾರಿ ಪ್ರಾರಂಭಿಸಲು ಸೂಕ್ತ ಕ್ರಮವಹಿಸಲಾಗುವುದು |

| | | | | | | | |
|---|---|---|---|---|---|---|---|
| 26 | ಜಲಾಭಿಮುಖಿ ಪ್ರದೇಶ ಅಭಿವೃದ್ಧಿ ಹಂತ-2A (Promonade development) | 15.24 | 15.24 | 05.05.2022 | 05.05.2023 | 05.05.2023 | ಸೆಪ್ಟೆಂಬರ್ ಮಾಹೆ ಒಳಗೆ ಕಾಮಗಾರಿ ಪ್ರಾರಂಭಿಸಲು ಸೂಕ್ತ ಕ್ರಮವಹಿಸಲಾಗುವುದು |
| 27 | ಜಲಾಭಿಮುಖಿ ಪ್ರದೇಶ ಅಭಿವೃದ್ಧಿ ಹಂತ-2B (Promonade development) | 1.57 | 1.57 | 05.05.2022 | 05.05.2023 | 05.05.2023 | ಸೆಪ್ಟೆಂಬರ್ ಮಾಹೆ ಒಳಗೆ ಕಾಮಗಾರಿ ಪ್ರಾರಂಭಿಸಲು ಸೂಕ್ತ ಕ್ರಮವಹಿಸಲಾಗುವುದು |
| 28 | ತಣ್ಣೀರ್‌ಬಾವಿ ಪ್ರದೇಶ ಅಭಿವೃದ್ಧಿ | 9.19 | 9.19 | 05.05.2022 | 05.05.2023 | 05.05.2023 | CRZ ಅನುಮೋದನೆಯ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ. |
| 29 | Water jetty ಉನ್ನತೀಕರಣ | 11.71 | 11.71 | 05.05.2022 | 05.05.2023 | 05.05.2023 | CRZ ಅನುಮೋದನೆಯ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ. |
| 30 | ಸುಲ್ತಾನ್ ಬತ್ತೇರಿ ಪ್ರದೇಶ ಅಭಿವೃದ್ಧಿ | 15.22 | 15.22 | 05.05.2022 | 05.05.2023 | 05.05.2023 | CRZ ಅನುಮೋದನೆಯ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ. |
| 31 | ನಯರ್ ಕುದುರ್ ಬಳಿ ಬಯಲು ರಂಗ ಮಂದಿರ ಹಾಗೂ ವಾಟರ್ ಸ್ಪೋರ್ಟ್ಸ್ ಉದ್ಯಾನವನ ಅಭಿವೃದ್ಧಿ | 49.65 | 49.65 | 05.05.2022 | 05.05.2023 | 05.05.2023 | CRZ ಅನುಮೋದನೆಯ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ. |
| 32 | ಸುಲ್ತಾನ್ ಬತ್ತೇರಿ ಪ್ರದೇಶದಲ್ಲಿ ಪಾದಚಾರಿ ಸಮುದ್ರ ನದಿ ಸಂಪರ್ಕ ಸೇತುವೆ ನಿರ್ಮಾಣ | 40.31 | 40.31 | 05.05.2022 | 05.05.2023 | 05.05.2023 | CRZ ಅನುಮೋದನೆಯ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ. |
| 33 | ಗುಜ್ಜರಕೆರೆಯಲ್ಲಿ Aeration ಕಾರಂಜಿ ಒದಗಿಸುವ ಕಾಮಗಾರಿ | 0.41 | 0.41 | 05.05.2022 | 05.11.2022 | 05.11.2022 | ಶೇ 95% ಕಾಮಗಾರಿ ಪೂರ್ಣಗೊಂಡಿದ್ದು, ಬಾಕಿ ಉಳಿದ ಕಾಮಗಾರಿಗಳು ಪ್ರಗತಿಯಲ್ಲಿದೆ. |
| 34 | ಮಂಗಳಾದೇವಿ ಬಸ್ ಟರ್ಮಿನಲ್ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ ಅಭಿವೃದ್ಧಿ | 4.45 | 4.45 | 30.03.2022 | 30.09.2023 | 31.09.2023 | ಕಾಮಗಾರಿ ಪ್ರಗತಿಯಲ್ಲಿದೆ. |
| | ಒಟ್ಟು | **814.12** | **781.37** | | | | |

## ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಕಾಮಗಾರಿ

### ಪ್ರಗತಿಯಲ್ಲಿರುವ ಕಾಮಗಾರಿ

| ಕ್ರ.ಸಂ | ಕಾಮಗಾರಿಯ ಹೆಸರು | SCP ಮೊತ್ತ | ಟೆಂಡರ್ ಮೊತ್ತ | ಕಾರ್ಯದೇಶ ನೀಡಿದ ದಿನಾಂಕ/LOA ನೀಡಿದ ದಿನಾಂಕ | ಕರಾರು ಪತ್ರದ ಪ್ರಕಾರ ಕೆಲಸ ಪೂರ್ಣಗೊಳಿಸಬೇಕಾದ ದಿನಾಂಕ | ಕಾಮಗಾರಿಯು ಪೂರ್ಣಗೊಳಿಸಲು ವಾಸ್ತವಿಕವಾಗಿ ಬೇಕಾಗಿರುವ ಅವಧಿ | ಪ್ರಸ್ತುತ ಸ್ಥಿತಿ |
|---|---|---|---|---|---|---|---|
| 1 | ಪ್ರದೇಶ ಆಧಾರಿತ ವ್ಯಾಪ್ತಿಯಲ್ಲಿನ ಸರ್ಕಾರಿ ಕಟ್ಟಡಗಳ ಮೇಲ್ಛಾವಣಿ ಸೋಲಾರ್ ಪ್ಯಾನಲ್ ಅಳವಡಿಕೆ | 7.08 | 7.08 | 30.03.2019 | 30.04.2021 | 31.03.2023 | ಒಟ್ಟು 1288 kW ವಿದ್ಯುತ್ ಉತ್ಪಾದನೆಯ ಗುರಿ ನಿಗದಿ ಪಡಿಸಲಾಗಿದ್ದು, ಪ್ರಸ್ತುತ 705kW ಮಾತ್ರ ಉತ್ಪಾದನೆಯಾಗುತ್ತಿದೆ. (ಇಎಸ್ಐ ಆಸ್ಪತ್ರೆ, ಮಂಗಳೂರು ಮಹಾನಗರ ಪಾಲಿಕೆ ಕಟ್ಟಡ, ಟೌನ್ ಹಾಲ್ ಮತ್ತು ಮಲ್ಲಿಕಟ್ಟೆಯ ಎಂಸಿಸಿ ಕಟ್ಟಡಕ್ಕೆ ಚಾಲನೆ ನೀಡಲಾಗಿದೆ. ಕೆಎಫ್‌ಡಿಸಿ ಕಟ್ಟಡದ ಫಲಕಗಳನ್ನು ನಿರ್ಮಿಸಲಾಗಿದೆ) ಅದರಂತೆ ಜಿಲ್ಲಾ ಪಂಚಾಯತ್ ಕಟ್ಟಡ, ಪಿಲಿಕುಳ ಮತ್ತು ಎಪಿಎಮ್‌ಸಿ ಕಟ್ಟಡಗಳ ಮೇಲ್ಛಾವಣಿಯಲ್ಲಿ [illegible] |
| 2 | ಹಂಪನ್ ಕಟ್ಟೆ ಹಳೆ ಬಸ್ ನಿಲ್ದಾಣ ಪ್ರದೇಶದಲ್ಲಿನ ಬಹುಮಹಡಿ ವಾಣಿಜ್ಯ ಸಂಕೀರ್ಣ, ಬಹುಮಹಡಿ ವಾಹನ ನಿಲುಗಡೆ ಕಾಮಗಾರಿ | 79.05 | 79.05 | 29.06.2020 | 01.09.2024 | 01.09.2024 | ಕಾಮಗಾರಿ ಪ್ರಗತಿಯಲ್ಲಿದೆ |
| 3 | ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ವಿದ್ಯುತ್ ದಾರಿದೀಪಗಳನ್ನು ಎಲ್.ಇ.ಡಿ ದೀಪಗಳನ್ನಾಗಿ ಬದಲಾಯಿಸುವುದು | 62.63 | 62.63 | 24.02.2021 | 24.04.2022 | 30.11.2022 | ಎಲ್.ಇ.ಡಿ ದೀಪ ಅಳವಡಿಕೆ ಕಾಮಗಾರಿ ಪ್ರಗತಿಯಲ್ಲಿದ್ದು ಒಟ್ಟು 13,500 ಎಲ್.ಇ.ಡಿ. ದೀಪಗಳನ್ನು ಅಳವಡಿಸಲಾಗಿದೆ. |
| 4 | ಕೇಂದ್ರ ಮಾರುಕಟ್ಟೆ ಹಾಗೂ ಮೀನು ಮಾರುಕಟ್ಟೆ ಪುನರ್ ನಿರ್ಮಾಣ | 114.03 | 114.03 | 28.10.2020 | 01.10.2025 | 01.10.2025 | ಹಳೆ ಮಾರುಕಟ್ಟೆ ಕಟ್ಟಡ ತೆರವುಗೊಳಿಸುವ ಕಾಮಗಾರಿ ಪ್ರಗತಿಯಲ್ಲಿದೆ |
| | ಒಟ್ಟು | **262.79** | **262.79** | | | | |